ಕರ್ನಾಟಕ ಸರ್ಕಾರ

ಸಂಖ್ಯೆ ಹಿಂವಕನಿ/ಡಿಬಿಟಿ/ಸಿಆರ್-12/2013-14

ಆಯುಕ್ತರ ಕಛೇರಿ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು. ದಿನಾಂಕ:24.03.2014

**ಅತೀ ಮುಖ್ಯ ಹಾಗೂ ತುರ್ತು**

**ಸುತ್ತೋಲೆ-14**

ವಿಷಯ: 2013-14ನೇ ಸಾಲಿನಲ್ಲಿ ಡಿ.ಬಿ.ಟಿ ಕಾರ್ಯಕ್ರಮ-ದಡಿಯಲ್ಲಿ ವಿವಿಧ ಯೋಜನೆಗಳ ಸೌಲಭ್ಯ ಮಂಜೂರಾತಿ ಕುರಿತ ದಾಖಲೆಗಳನ್ನು ನಿರ್ವಹಿಸುವ ಬಗ್ಗೆ

******

1. ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2013-14ನೇ ಸಾಲಿನಲ್ಲಿ (ಅ) "ಊಟ ಮತ್ತು ವಸತಿ ಸಹಾಯ ಯೋಜನೆ", "ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ" ಮಂಜೂರಾತಿಗೆ ಸಂಬಂಧಿಸಿದಂತೆ ಮಂಜೂರಾತಿ ಆದೇಶ, ಬಿಲ್ಲುಗಳುನ್ನು ಖಜಾನೆಗೆ ಸಲ್ಲಿಸಿರುತ್ತೀರಿ (ಆ) ಅದರಂತೆ ಗುಂಪು-ಎ ಕೋರ್ಸಿನ ವಿದ್ಯಾರ್ಥಿಗಳ "ಶುಲ್ಕ ವಿನಾಯಿತಿ" ಮಂಜೂರಾತಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳ ದಾಖಲೆಗಳ ಪರಿಶೀಲನೆ ಕುರಿತಂತೆ ಧೃಢೀಕರಣವನ್ನು ಆಯುಕ್ತಾಲಯಕ್ಕೆ ಸಲ್ಲಿಸಿರುತ್ತೀರಿ. (ಇ) ಇನ್ನುಳಿದಂತೆ ಜಿಲ್ಲಾ ವಲಯ ಯೋಜನೇತರ ಬಾಬ್ತಿನ ಶುಲ್ಕ ವಿನಾಯಿತಿ ಕಾರ್ಯಕ್ರಮಗಳಲ್ಲಿ ಮಂಜೂರಾದ "ಶುಲ್ಕ ವಿನಾಯಿತಿ" ಮಂಜೂರಾತಿ ಆದೇಶ ಮತ್ತು ಬಿಲ್ಲನ್ನು ಖಜಾನೆಗೆ ಸಲ್ಲಿಸಿರುತ್ತೀರಿ.

2. ಮೇಲ್ಕಂಡ ಮೂರೂ ಕಾರ್ಯಕ್ರಮಗಳಲ್ಲಿ ಮಂಜೂರಾತಿ ನೀಡುವುದಕ್ಕೆ ಮೊದಲು ಜಿಲ್ಲಾವಾರು ಲಭ್ಯವಿರುವ ಆಯವ್ಯಯದ ಮಿತಿಯಲ್ಲಿ ವಿವಿಧ ಹಿಂದುಳಿದ ವರ್ಗಗಳ ಪ್ರವರ್ಗವಾರು ಮೀಸಲಾತಿಯಂತೆ ಆಯವ್ಯಯ ಹಂಚಿಕೆ ಹಾಗೂ ಪ್ರತಿಯೊಂದು ಪ್ರವರ್ಗಗಳಡಿಯಲ್ಲಿ ವಿವಿಧ ಕೋರ್ಸುಗಳ ಗುಂಪುಗಳಿಗೆ Weighted Average ಆಧಾರದ ಮೇಲೆ ಯಾವ ರೀತಿಯಲ್ಲಿ ಹಂಚಿಕೆ ಮಾಡಲಾಗಿದೆ ಹಾಗೂ ಈ ರೀತಿ ಪ್ರತಿ ಕೋರ್ಸಿನ ಗುಂಪಿನಲ್ಲಿ ಮೆರಿಟ್‌ವಾರು ಮಂಜೂರಾದ ವಿದ್ಯಾರ್ಥಿಗಳ ಪಟ್ಟಿಗಳು ಇಪಾಸ್ ಪೋರ್ಟಲ್‌ನಲ್ಲಿ ಲಭ್ಯವಿದೆ.

3. ಪ್ರತಿಯೊಬ್ಬ Drawing and Disbursing Officer ಕಛೇರಿಗಳಲ್ಲಿ ಈ ಕೆಳಕಂಡ ಕಾರ್ಯಕ್ರಮಗಳಿಗೆ ಸಂಬಂಧಿಸಿದ ದಾಖಲೆಗಳನ್ನು ನಿರ್ವಹಿಸಲು ಸೂಚಿಸಿದೆ. ಯಾವ ಯಾವ ದಾಖಲೆಗಳನ್ನು ಹೇಗೆ ನಿರ್ವಹಿಸಬೇಕು ಎಂಬುದನ್ನು ಈ ಸುತ್ತೋಲೆಯಲ್ಲಿ ನೀಡಲಾಗಿದೆ.

| **Drawing and Disbursing Officer ಕಛೇರಿ** | **ಕಾರ್ಯಕ್ರಮಗಳು** |
|---|---|
| ತಾಲ್ಲೂಕು ಮಟ್ಟದ ಕಛೇರಿ | 1. ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ<br>2. ಊಟ ಮತ್ತು ವಸತಿ ಸಹಾಯ ಯೋಜನೆ |
| ಜಿಲ್ಲಾ ಮಟ್ಟದ ಕಛೇರಿ | 1. ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ<br>2. ಊಟ ಮತ್ತು ವಸತಿ ಸಹಾಯ ಯೋಜನೆ<br>3. ಶುಲ್ಕ ವಿನಾಯಿತಿ, ಗುಂಪು-ಬಿ, ಸಿ, ಡಿ ಕೋರ್ಸುಗಳಿಗೆ |
| ಆಯುಕ್ತಾಲಯ | 1. ಗುಂಪು-ಎ ಕೋರ್ಸಿನ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ |

4. ಇ-ಪಾಸ್ ಪೋರ್ಟಲ್‌ನಲ್ಲಿ –

i. FAAS Budget Allocation Report,
ii. PMS BC Budget Allocation Report)
iii. FC Budget Allocation Report (Dist-Non-Plan fund),

(ಅ) **ಮೊದಲನೆಯದಾಗಿ,** ಈ ಮೇಲಿನ Financial Report ಗಳಲ್ಲಿ ನಿಮ್ಮ ಜಿಲ್ಲೆಗೆ ಸಂಬಂಧಿಸಿದ ಬಜೆಟ್ ಅನ್ನು ಕ್ಲಿಕ್ ಮಾಡಿ.

**ಹಿಂದುಳಿದ ವರ್ಗಗಳ ಪ್ರವರ್ಗವಾರು ಮೀಸಲಾತಿಯಂತೆ** ಹಂಚಿಕೆ ಮಾಡಲಾದ –

iv. FAAS Scheme BC Students Budget Allocation Report,
v. PMS Scheme BC Students Budget Allocation Report (both Plan and Non-Plan)
vi. FC BC Dist Non-Plan Budget Allocation,

– ಮಾಹಿತಿಯನ್ನು ಡೌನ್ ಲೋಡ್ ಮಾಡಿಕೊಳ್ಳುವುದು.

(ಆ) **ಎರಡನೆಯದಾಗಿ,** ಮೇಲಿನಂತೆ ಪ್ರತಿಯೊಂದು ಕಾರ್ಯಕ್ರಮವಾರು ಪ್ರವರ್ಗವಾರು ಮೀಸಲಾತಿ ಹಂಚಿಕೆ ಪಟ್ಟಿಯನ್ನು ಡೌನ್‌ಲೋಡ್ ಮಾಡಿಕೊಂಡ ನಂತರ, ಪ್ರತಿಯೊಂದು ಪ್ರವರ್ಗದಡಿಯಲ್ಲಿ, **ವಿವಿಧ ಕೋರ್ಸುಗಳ ಗುಂಪುವಾರು ಹಂಚಿಕೆ** ಮಾಡಲಾದ –

vii. FAAS Scheme BC Students Budget Allocation Report,
viii. PMS Scheme BC Students Budget Allocation Report (both Plan and Non-Plan)
ix. FC BC Dist Non-Plan Budget Allocation,

– ಮಾಹಿತಿಯನ್ನು ಡೌನ್ ಲೋಡ್ ಮಾಡಿಕೊಳ್ಳುವುದು.

(ಇ) **ಮೂರನೆಯದಾಗಿ,** ಪ್ರತಿಯೊಂದು ಮೀಸಲಾತಿ ಪ್ರವರ್ಗದಡಿ, ಪ್ರತಿಯೊಂದು ಕೋರ್ಸಿನ ಗುಂಪನ್ನು ಕ್ಲಿಕ್ ಮಾಡಿ, **ವಿದ್ಯಾರ್ಥಿಗಳ ಮೆರಿಟ್‌ವಾರು ಪಟ್ಟಿಯನ್ನು** ಡೌನ್‌ಲೋಡ್ ಮಾಡಿಕೊಂಡು ಮುದ್ರಿಸಿಕೊಳ್ಳುವುದು.

5. **ಮೀಸಲಾತಿ ಪ್ರವರ್ಗವಾರು / ಕೋರ್ಸಿನ ಗುಂಪುವಾರು ಆಯವ್ಯಯ ಹಂಚಿಕೆ/ ಮೆರಿಟ್ ಪಟ್ಟಿಗಳು:** ಪ್ರತಿಯೊಂದು ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ, ಈ ಮೇಲ್ಕಂಡ ವಿವರಗಳನ್ನು ಪ್ರತ್ಯೇಕವಾಗಿ, ಪ್ರವರ್ಗವಾರು ಮೀಸಲಾತಿ ಹಂಚಿಕೆ, ಗುಂಪುವಾರು ಹಂಚಿಕೆ, ವಿದ್ಯಾರ್ಥಿಗಳ ಮೆರಿಟ್ ಪಟ್ಟಿಯನ್ನು ಅನುಕ್ರಮವಾಗಿ ಜೋಡಿಸಿ, ಪುಟ ಸಂಖ್ಯೆಗಳನ್ನು ನಮೂದು ಮಾಡಿ, Spiral Bind ಮಾಡಿಸಿ, ನಿಮ್ಮ ಕಛೇರಿಯಲ್ಲಿ ಆಡಳಿತಾತ್ಮಕ ದಾಖಲೆಯನ್ನಾಗಿ, ಖಾಯಂ ದಾಖಲಾತಿಯಾಗಿ ಹಾಗೂ ಆಡಿಟ್ ಉದ್ದೇಶಕ್ಕಾಗಿ ನಿರ್ವಹಿಸಬೇಕು.

6. **ಹಣ ಬಿಡುಗಡೆ ಆದೇಶ/ ಮಂಜೂರಾತಿ ಅದೇಶಗಳು/ ಬಿಲ್ಲುಗಳು:** ಈಗಾಗಲೇ ಪ್ರತಿಯೊಂದು ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ,

(1) ಮಂಜೂರಾತಿ ಆದೇಶದ ನಡವಳಿಗಳ ಪ್ರತಿ,
(2) ಕಾಲೇಜುವಾರು ವಿದ್ಯಾರ್ಥಿಗಳ ವಿವರಗಳಿರುವ ಅನುಬಂಧ

(3) ಬ್ಯಾಂಕುವಾರು ವಿದ್ಯಾರ್ಥಿಗಳ ವಿವರಗಳಿರುವ ಅನುಬಂಧ

(4) ಡಿ.ಸಿ ಬಿಲ್ಲಿನ ಪ್ರತಿ / ಕೆ.ಎಫ್.ಸಿ 32–ಎ

(5) ಕೇಂದ್ರ ಕಛೇರಿ / ಜಿಲ್ಲಾ ಪಂಚಾಯತ್ ನಿಂದ ಅನುದಾನ ಬಿಡುಗಡೆ ಮಾಡಲಾದ ಆದೇಶಗಳ ಪ್ರತಿಗಳು

– ಇವುಗಳನ್ನು ಅನುಕ್ರಮವಾಗಿ ಜೋಡಿಸಿ, ಪುಟ ಸಂಖ್ಯೆಯನ್ನು ನಮೂದು ಮಾಡಿ, Spiral Bind ಮಾಡಿಸಿ, ಸಂಬಂಧಿಸಿದ Drawing and Disbursing Officer ಕಛೇರಿಯಲ್ಲಿ ಆಡಳಿತಾತ್ಮಕ ದಾಖಲೆಯನ್ನಾಗಿ, ಖಾಯಂ ದಾಖಲೆಯಾಗಿ ಹಾಗೂ ಆಡಿಟ್ ಉದ್ದೇಶಕ್ಕಾಗಿ ನಿರ್ವಹಿಸಬೇಕು.

7. **ಪರಿಶೀಲನಾ ಅಧಿಕಾರಿ/ತಾಲ್ಲೂಕು ಅಧಿಕಾರಿ/ ಜಿಲ್ಲಾ ಅಧಿಕಾರಿಗಳ ವಿವರಗಳು:** ಈ ಮೇಲ್ಕಂಡ ಯೋಜನೆಗಳ ಆನ್‌ಲೈನ್ ಅರ್ಜಿಗಳು ಮತ್ತು ಅರ್ಜಿಗಳೊಂದಿಗೆ ಲಗತ್ತಿಸಿರುವ ದಾಖಲಾತಿಗಳನ್ನು ಪರಿಶೀಲನೆ ಮಾಡಿದ, (ಅ) ತಾಲ್ಲೂಕುವಾರು, ಕಾಲೇಜುವಾರು ಪರಿಶೀಲನಾ ಅಧಿಕಾರಿಗಳ, (ಆ) ತಾಲ್ಲೂಕು ವಿಸ್ತರಣಾಧಿಕಾರಿಗಳ ಹಾಗೂ (ಇ) ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಹೆಸರು, ಪದನಾಮ, ಮೊಬೈಲ್ ಸಂಖ್ಯೆ ಇವುಗಳನ್ನು ಧೃಢೀಕರಿಸಿ ಬೈಂಡಿಂಗ್ ಮಾಡಿಸಿ, ಆಯಾ ತಾಲ್ಲೂಕು ಮತ್ತು ಜಿಲ್ಲಾ ಕಛೇರಿಗಳಲ್ಲಿ ನಿರ್ವಹಿಸಬೇಕು.

8. **ಸರ್ಕಾರಿ ಆದೇಶಗಳು/ ಆಯುಕ್ತಾಲಯದ ಸುತ್ತೋಲೆಗಳು:** ಈ ಮೇಲ್ಕಂಡ ಯೋಜನೆಗಳ ಸರ್ಕಾರಿ ಆದೇಶಗಳು, ತಿದ್ದುಪಡಿಗಳು, ಆಯುಕ್ತಾಲಯದ ಸುತ್ತೋಲೆಗಳು (ಡಿಬಿಟಿ ಸುತ್ತೋಲೆ-1 ರಿಂದ 14 ರವರೆಗೆ) ಹಾಗೂ ಡಿಬಿಟಿ. ಗೆ ಸಂಬಂಧಿಸಿದ ಪತ್ರಗಳು, ಇವುಗಳನ್ನು ಬೈಂಡಿಂಗ್ ಮಾಡಿಸಿ ನಿರ್ವಹಿಸುವುದು.

24/3/14

(ಆರ್. ಶಾಂತರಾಜ್ ಭಾ.ಆ.ಸೇ.,)
ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು.
24/3/14

ಇವರಿಗೆ:

1. ರಾಜ್ಯದ ಎಲ್ಲಾ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳಿಗೆ
2. ರಾಜ್ಯದ ಎಲ್ಲಾ ತಾಲ್ಲೂಕು ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿಗಳಿಗೆ, ಜಿಲ್ಲಾ ಹಿಂ.ವ. ಕಲ್ಯಾಣಾಧಿಕಾರಿಗಳ ಮೂಲಕ

ಪ್ರತಿಯನ್ನು:

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ – ಜಿಲ್ಲಾ ಹಿಂ.ವ. ಕಲ್ಯಾಣಾಧಿಕಾರಿಗಳ ಮೂಲಕ ಮಾಹಿತಿಗೆ
2. ಜಂಟಿ ನಿರ್ದೇಶಕರು (ವಸತಿ ನಿಲಯ), ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
3. ಉಪ ನಿರ್ದೇಶಕರು (ವಸತಿ ನಿಲಯ), ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
4. ಡಿ.ಬಿ.ಟಿ ಶಾಖೆ ಮತ್ತು ವಿದ್ಯಾರ್ಥಿ ವೇತನ ಶಾಖೆ.